ವಿಜಯ ಕರ್ನಾಟಕ

# ಮಹಾವೀರ ಜೈನ್ ಕಾಲೇಜಿನ ಅನಘಾಗೆ 22ನೇ ರ‍್ಯಾಂಕ್

**ವಿಕ ಸುದ್ದಿಲೋಕ** ಬೆಂಗಳೂರು

ರಾಷ್ಟ್ರೀಯ ಕಾನೂನು ಶಾಲೆಗಳಿಗೆ ಪ್ರವೇಶಾವಕಾಶ ಕಲ್ಪಿಸುವ 'ಕಾಮನ್ ಲಾ ಎಂಟ್ರೆನ್ಸ್ ಟೆಸ್ಟ್ (ಕ್ಲಾಟ್)' ಪರೀಕ್ಷೆ ಫಲಿತಾಂಶ ಗುರುವಾರ ಹೊರಬಿದ್ದಿದ್ದು, ಬೆಂಗಳೂರಿನ ಮಹಾವೀರ ಜೈನ್ ಕಾಲೇಜಿನ ವಿದ್ಯಾರ್ಥಿ ಎಂ.ಪಿ.ಅನಘಾ, ರಾಜ್ಯಕ್ಕೆ ಪ್ರಥಮ ಸ್ಥಾನ (ಟಾಪರ್) ಪಡೆದಿದ್ದಾರೆ. ರಾಷ್ಟ್ರ ಮಟ್ಟದಲ್ಲಿ 22ನೇ ರ‍್ಯಾಂಕ್ ಪಡೆದಿದ್ದಾರೆ.



ಅನಘಾ

ನಗರದ ಡೆಲ್ಲಿ ಪಬ್ಲಿಕ್ ಸ್ಕೂಲ್‌ನ (ಉತ್ತರ) ಶಶಾಂಕ ತಿವಾರಿ ರಾಜ್ಯಕ್ಕೆ 2ನೇ ಟಾಪರ್ ಆಗಿದ್ದು, ರಾಷ್ಟ್ರಮಟ್ಟದಲ್ಲಿ 31ನೇ ರ‍್ಯಾಂಕ್ ಅಲಂಕರಿಸಿದ್ದಾರೆ. ಇದೇ ಶಾಲೆಯ ಮತ್ತೊಬ್ಬ ವಿದ್ಯಾರ್ಥಿ ಕಾರ್ತಿಕ್ ರೈ ರಾಜ್ಯದ 3ನೇ ಟಾಪರ್ ಆಗಿದ್ದು, ರಾಷ್ಟ್ರ ಮಟ್ಟದಲ್ಲಿ 53ನೇ ರ‍್ಯಾಂಕ್ ಗಳಿಸಿದ್ದಾರೆ.

ರಾಷ್ಟ್ರ ಮಟ್ಟದ ಮೊದಲ ಮೂರು ರ‍್ಯಾಂಕ್‌ಗಳು ಜೈಪುರದ ವಿದ್ಯಾರ್ಥಿಗಳ ಪಾಲಾಗಿವೆ. ಅಮನ್ ಗರ್ಗ್ ಮೊದನೇ ರ‍್ಯಾಂಕ್, ದೇವಿಶ್ ಕೌಶಿಕ್ 2ನೇ ರ‍್ಯಾಂಕ್ ಹಾಗೂ ಆನ್ಮೋಲ್ ಗುಪ್ತ ಎಂಬುವವರು 3ನೇ ರ‍್ಯಾಂಕ್ ಪಡೆದಿದ್ದಾರೆ. ಈ ಬಾರಿ ದೇಶಾದ್ಯಂತ ಒಟ್ಟು 59 ಸಾವಿರ ವಿದ್ಯಾರ್ಥಿಗಳು ಕ್ಲಾಟ್ ಪರೀಕ್ಷೆ ಬರೆದಿದ್ದರು.

ಫಲಿತಾಂಶದ ಬಗ್ಗೆ ಮಾಧ್ಯಮಗಳೊಂದಿಗೆ ಮಾತನಾಡಿದ ಅನಘಾ, 'ಈ ಫಲಿತಾಂಶ ಖುಷಿ ತಂದಿದೆ. ಈ ಬಾರಿಯ ದ್ವಿತೀಯ ಪಿಯುಸಿಯಲ್ಲಿ (ವಾಣಿಜ್ಯ) ಶೇ.89.5ರಷ್ಟು ಅಂಕಗಳನ್ನು ಪಡೆದಿದ್ದೇನೆ. ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಇಂಡಿಯಾ ಯೂನಿವರ್ಸಿಟಿ (ಎನ್‌ಎಲ್‌ಎಸ್‌ಐಯು) ನನ್ನ ಪ್ರಥಮ ಆದ್ಯತೆ', ಎಂದು ಸಂತಸ ಹಂಚಿಕೊಂಡರು.

ಪಿಯುಸಿಯಲ್ಲಿ (ವಾಣಿಜ್ಯ) ಶೇ.90ರಷ್ಟು ಅಂಕ ಪಡೆದಿದ್ದೇನೆ. ನನ್ನ ಸಂಬಂಧಿ ಕರೊಬ್ಬರು ವಕೀಲರಾಗಿದ್ದು, ಕ್ಲಾಟ್ ಪರೀಕ್ಷೆಯಲ್ಲಿ 31ನೇ ರ‍್ಯಾಂಕ್ ಪಡೆಯಲು ಅವರೇ ಪ್ರೇರಣೆ. ಕ್ಲಾಟ್ ಪರೀಕ್ಷೆಗಾಗಿ ವಿಶೇಷ ತರಬೇತಿಯನ್ನು ಪಡೆದಿದ್ದೆ. ವೇಳಾ ಪಟ್ಟಿಯಂತೆ ಅಭ್ಯಾಸ ಮಾಡಲು ಪ್ರಾರಂಭಿಸಿದೆ. ಶಿಕ್ಷಕರು ಪಾಠ ಮಾಡುವಾಗ ಎಲ್ಲಾ ಅಂಶಗಳನ್ನು ನೋಟ್ ಮಾಡಿಕೊಳ್ಳುತ್ತಿದ್ದೆ, ನಿತ್ಯ 5ರಿಂದ 6 ಗಂಟೆಗಳ ಕಾಲ ಓದುತ್ತಿದ್ದೆ.

**– ಶಶಾಂಕ ತಿವಾರಿ**

'ದ್ವಿತೀಯ ಪಿಯುಸಿಯಲ್ಲಿ ಶೇ.97ರಷ್ಟು ಅಂಕ ಪಡೆದಿದ್ದೇನೆ. ಕ್ಲಾಟ್ ಪರೀಕ್ಷೆಯಲ್ಲಿ 53ನೇ ರ‍್ಯಾಂಕ್ ಪಡೆಯಲು ನನ್ನ ತಂದೆಯೇ ಪ್ರೇರಣೆ. ನನ್ನ ತಂದೆ ಸಹ ಕಾನೂನು ಪದವೀಧರರಾಗಿದ್ದು, ಆರ್ಥಿಕ ತೊಂದರೆಯಿಂದ ಬಲವಂತವಾಗಿ ಬ್ಯಾಂಕ್ ಸೇವೆಗೆ ಸೇರಬೇಕಾಯಿತು. ಆದ್ದರಿಂದ ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಇಂಡಿಯಾ ಯೂನಿವರ್ಸಿಟಿಯಲ್ಲಿ ಪದವಿ ಪಡೆದು, ನಮ್ಮ ತಂದೆಯ ಕನಸನ್ನು ಈಡೇರಿಸುತ್ತೇನೆ,' ಎಂದರು.

**– ಕಾರ್ತಿಕ್ ರೈ**